# ಶ್ರೀಚೈತನ್ಯ ಮಹಾಪ್ರಭು

ಸ್ವಾಮಿ ತಪಸ್ಯಾನಂದ

ಶ್ರೀಚೈತನ್ಯ ಮಹಾಪ್ರಭುಗಳು ಆಧ್ಯಾತ್ಮಿಕ ಜಗತ್ತಿನಲ್ಲಿ ಹರಿಭಕ್ತಿಯನ್ನು ಪಸರಿಸಿದ ಅವತಾರಪುರುಷರೆಂದೇ ಪ್ರಸಿದ್ಧರಾದವರು. ರಾಮಕೃಷ್ಣ ಮಠ ಮತ್ತು ಮಿಷನ್ನಿನ ಉಪಾಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ತಪಸ್ಯಾನಂದಜಿಯವರು ಶ್ರೀಚೈತನ್ಯರನ್ನು ಕುರಿತು ಆಳವಾದ ಅಧ್ಯಯನವನ್ನು ಮಾಡಿ ತಮ್ಮ ವಿದ್ವತ್ಪೂರ್ಣವಾದ ಗ್ರಂಥದಲ್ಲಿ ಅವರ ಜೀವನ ಮತ್ತು ಸಾಧನೆಯನ್ನು ಸಮಗ್ರವಾಗಿ ವಿವರಿಸಿದ್ದಾರೆ. ಇಂಗ್ಲೀಷಿನ ಈ ಕಥನವನ್ನು ಕನ್ನಡಿಸಿರುವವರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಾಮಿ ವೀರೇಶಾನಂದರು.

'ಶ್ರೀಚೈತನ್ಯ ಚರಿತಾಮೃತ' – ಇದು ಬಂಗಾಳಿ ಭಾಷೆಯಲ್ಲಿರುವ ಶ್ರೀಕೃಷ್ಣಚೈತನ್ಯರ ಜೀವನದ ಮೇಲಿನ ಅಧಿಕೃತ ಗ್ರಂಥ. ಇದರ ಕರ್ತೃ ಶ್ರೀ ಕೃಷ್ಣದಾಸ್ ಕವಿರಾಜ್ (೧೫೧೭–೧೫೮೨) ಎನ್ನುವವರು. ಅವರು ಶ್ರೀಚೈತನ್ಯರ ಸಮಕಾಲೀನರೂ ಆಪ್ತ ಸೇವಕರೂ ಆಗಿದ್ದ ರಘುನಾಥದಾಸರ ಶಿಷ್ಯರು. ರಘುನಾಥದಾಸರು ಶ್ರೀಚೈತನ್ಯರ ಸೇವೆ ಮಾಡಿದ್ದು ಅವರು ಪುರಿಯಲ್ಲಿ ವಾಸವಾಗಿದ್ದಾಗ.

ಸಂಸ್ಕೃತ ಮತ್ತು ಪರ್ಷಿಯನ್ ಭಾಷೆಗಳಲ್ಲಿ ಪಾಂಡಿತ್ಯವನ್ನು ಪಡೆದಿದ್ದ ಶ್ರೀ ಕೃಷ್ಣದಾಸ್ ಕವಿರಾಜ್ ತಮ್ಮ ಬಾಳಿನ ಆರಂಭ ಕಾಲದಲ್ಲಿಯೇ ಬರ್ದ್ವಾನ್ ನಗರದ ತಮ್ಮ ಸ್ವಗೃಹವನ್ನು ಬಿಟ್ಟು ವೃಂದಾವನದತ್ತ ನಡೆದರು. ವೃಂದಾವನ ಕ್ಷೇತ್ರಕ್ಕೆ ೧೨ ಮೈಲುಗಳ ದೂರದಲ್ಲಿರುವ ರಾಧಾಕುಂಡದಲ್ಲಿ ನೆಲೆಸಿದರು. ಪ್ರಾರಂಭದಲ್ಲಿ, ಸಂಸ್ಕೃತ ಭಾಷೆಯಲ್ಲಿ ಅವರ ಬರವಣಿಗೆ ಸಾಗಿತ್ತು. ನಂತರ ಭಕ್ತರ ಪ್ರಾರ್ಥನೆಯ ಮೇರೆಗೆ ಬಂಗಾಳಿ ಭಾಷೆಯ ಮಹೋನ್ನತ ಕೃತಿಯೆಂದು ಪರಿಗಣಿತವಾದ ತಮ್ಮ ಈ ಬೃಹದ್‌ಗ್ರಂಥವನ್ನು ರಚಿಸಲು ಅವರು ಆರಂಭಿಸಿದರು. ಆಗಲೇ ಅವರಿಗೆ ವೃದ್ಧಾಪ್ಯ. ಈ ಗ್ರಂಥದ ರಚನೆ ಕೊನೆಗೊಂಡದ್ದು ೧೫೮೧ರಲ್ಲಿ, ಅವರ ಅವಸಾನಕ್ಕೆ ಕೇವಲ ಒಂದು ವರ್ಷದ ಮೊದಲು. ಈ ಮಹಾಕೃತಿಯನ್ನು ಸಂಗ್ರಹಿಸಿ ಅನುವಾದಿಸಿದವರು ಶ್ರೀ ಜದುನಾಥ ಸರ್ಕಾರ್. ಈ ಬರಹದಲ್ಲಿ ವರ್ಣಿಸಿರುವ ಶ್ರೀಚೈತನ್ಯ ಮಹಾಪ್ರಭುವಿನ ಜೀವನವೃತ್ತಾಂತವು ಈ ಸಂಗ್ರಹದ ಮೇಲೆ ಆಧಾರಿತವಾಗಿದೆ. ಈ ಗ್ರಂಥದ ಜತೆಗೆ **'ಅಮೃತಬಜಾರ್ ಪತ್ರಿಕೆ'** ಯ ಸುಪ್ರಸಿದ್ಧ ಸಂಪಾದಕರಾಗಿದ್ದ ಶ್ರೀ ಶಿಶಿರ್ ಕುಮಾರ್ ಘೋಷ್‌ರ **'ಭಗವಾನ್ ಗೌರಾಂಗ'** ಎಂಬ ಗ್ರಂಥದ ಸಂಕ್ಷಿಪ್ತ ಅವತರಣಿಕೆಯಿಂದಲೂ ನಾವು ವಿಷಯ ಸಂಗ್ರಹಣೆಯನ್ನು ಮಾಡಿದ್ದೇವೆ. ಇದರಲ್ಲಿ ಶ್ರೀ ಘೋಷರು ಚೈತನ್ಯರ ಬಾಲ್ಯದ ದಿನಗಳ ಬಗ್ಗೆ ಅತಿ ಆಸಕ್ತಿಕರವಾದ ಮತ್ತು ಬೆಳಕು ನೀಡುವ ಹಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆ ಅವತಾರಪುರುಷನ ಬಗ್ಗೆ ಬಂಗಾಳಿ ಭಾಷೆಯಲ್ಲಿ ಇರುವ ಹಲವಾರು ಗ್ರಂಥಗಳಿಂದ ಸಂಗ್ರಹಿಸಿದ ಅನೇಕ ಮಾಹಿತಿಗಳನ್ನು ಈ ಗ್ರಂಥವು ಒಳಗೊಂಡಿದೆ.



## ಬಾಲ್ಯ ಜೀವನ

ಶ್ರೀಚೈತನ್ಯರ (೧೪೮೬–೧೫೩೩) ಜನನವಾದದ್ದು ೧೪೮೬ ಫೆಬ್ರುವರಿ ತಿಂಗಳ ನಾಲ್ಕನೆಯ ತಾರೀಖಿನಂದು. ಅಂದು ಚಂದ್ರಗ್ರಹಣ. ಅವರು ಹುಟ್ಟಿದ್ದು ಬಂಗಾಳದ ನವದ್ವೀಪ ನಗರದ ಮಾಯಾಪುರ ಎಂಬಲ್ಲಿ. ತಂದೆಯಾದ ಜಗನ್ನಾಥ ಮಿಶ್ರ ಅಲ್ಲಿನ ಹೆಸರಾಂತ ಪಂಡಿತರಾಗಿದ್ದರು. ತಾಯಿ, ಸಾಧ್ವಿಯಾದ ಶಚೀದೇವಿ. ನವದ್ವೀಪವಿರುವುದು ಆಧುನಿಕ ಕೊಲ್ಕತಾ ಮಹಾನಗರಕ್ಕೆ ಉತ್ತರದಿಕ್ಕಿನಲ್ಲಿ, ೩೩ ಮೈಲಿಗಳ ದೂರದಲ್ಲಿ. ಪಾವನ ಗಂಗೆಯ ದಡದಲ್ಲಿ. ನವದ್ವೀಪವು ನದಿಯಾ ಜಿಲ್ಲೆಗೆ ಸೇರಿತ್ತು. ೧೬ನೆಯ ಶತಮಾನದಲ್ಲಿ ಅದೊಂದು ಸಂಪದ್ಭರಿತ ಪಟ್ಟಣವಾಗಿತ್ತು. ಅದು ದೊಡ್ಡ ವಾಣಿಜ್ಯ ಕೇಂದ್ರವಾಗಿತ್ತಲ್ಲದೆ

ಬಹು ಮುಖ್ಯವಾದ ವಿದ್ಯಾಕೇಂದ್ರವೂ ಆಗಿತ್ತು.

ನವ್ಯನ್ಯಾಯ ಎಂದು ಕರೆಯಲ್ಪಡುವ ನ್ಯಾಯಶಾಸ್ತ್ರದ ನೂತನ ಪ್ರಕಾರವು ಮಿಥಿಲೆಯಲ್ಲಿ ಹುಟ್ಟಿತು. ಬಹು ಹಿಂದೆಯೇ ಅದನ್ನು ನವದ್ವೀಪದಲ್ಲಿ ಪ್ರಚುರಗೊಳಿಸಲಾಯಿತು. ನಂತರ ಆ ಶಾಸ್ತ್ರವು ಮಹಾ ವಿದ್ವಾಂಸರ ಪರಂಪರೆಯಲ್ಲಿ ಅಭಿವೃದ್ಧಿ ಹೊಂದಿತು. ಅವರುಗಳಲ್ಲಿ ಮುಖ್ಯರಾದವರು ಗಂಗೇಶ ಉಪಾಧ್ಯಾಯ ಎನ್ನುವವರು. ಅವರ ಕಾಲ ಸುಮಾರು ಕ್ರಿಶ. ೧೨೦೦. ಭಾರತದಾದ್ಯಂತ ವಿದ್ಯಾರ್ಥಿಗಳು ನ್ಯಾಯಶಾಸ್ತ್ರದ ಅಧ್ಯಯನಕ್ಕಾಗಿಯೂ, ಮಹಾಪಂಡಿತರೊಬ್ಬರ ಹಾಗೂ ಉತ್ತಮ ವಿದ್ಯಾಕೇಂದ್ರವೊಂದರ ಆಶ್ರಯ ಪಡೆಯುವುದಕ್ಕಾಗಿಯೂ ನವದ್ವೀಪಕ್ಕೆ ಬರುತ್ತಿದ್ದರು. ನದಿಯಾದ ಧನಿಕ ಸಮಾಜವು ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಪೋಷಣೆಯನ್ನು ಉದಾರ ರೀತಿಯಲ್ಲಿ ಕೈಕೊಂಡಿದ್ದರಿಂದಲೇ ನ್ಯಾಯಶಾಸ್ತ್ರದ ಶಿಕ್ಷಣ ಮತ್ತು ಪ್ರಸಾರದ ಈ ಬಗೆಯ ಪುರೋವೃದ್ಧಿ ಸಾಧ್ಯವಾದದ್ದು.

ಶ್ರೀಚೈತನ್ಯರ ಅವತಾರಕಾಲ ೧೫ನೇ ಶತಮಾನ. ಆ ಸಮಯದಲ್ಲಿ ನವದ್ವೀಪವು ಒಂದು ಉತ್ತಮ ಶೈಕ್ಷಣಿಕ ಕೇಂದ್ರವೆಂದು ಹೆಸರುವಾಸಿಯಾಗಿದ್ದರೂ, ಅಲ್ಲಿ ಆಧ್ಯಾತ್ಮಿಕ ಪ್ರಭೆಯು ಕಾಣಬರುತ್ತಿರಲಿಲ್ಲ. ವೈಷ್ಣವ ಸಂಪ್ರದಾಯವು ಆಚರಣೆಯಲ್ಲಿ ಇತ್ತಾದರೂ, ಬಹುತೇಕ ಪಂಡಿತರು ಆಧ್ಯಾತ್ಮಿಕ ತೇಜಸ್ಸಿನಿಂದ ವಂಚಿತರಾಗಿದ್ದರು. ಮದ್ಯಮಾಂಸಗಳ ಸೇವನೆ ಮತ್ತು ತಾಂತ್ರಿಕ ಆಚರಣೆಗಳು ಪಂಡಿತರ ಮಧ್ಯೆ ಕೂಡ ಸರ್ವೇಸಾಧಾರಣವಾಗಿಬಿಟ್ಟಿತ್ತು. ಧರ್ಮವು ಬರಿಯ ಯಾಂತ್ರಿಕ ಕ್ರಿಯೆಗಳ ಮಟ್ಟಕ್ಕೆ ಅವನತಿಯನ್ನು ಹೊಂದಿತ್ತು. ಪಂಡಿತರು ತಮ್ಮ ಬೌದ್ಧಿಕ ಸಾಮರ್ಥ್ಯವನ್ನು ಕಟುವಾದ ಮತ್ತು ಪ್ರದರ್ಶನಾತ್ಮಕ ವಾಗ್ವಿವಾದಗಳಲ್ಲಿ ಮಾತ್ರ ಕಳೆಯುತ್ತಿದ್ದರು. ಅವುಗಳ ಜತೆಗೇ ಭಾರಿ ಔತಣಗಳು ಮತ್ತು ಕೀಳುಮಟ್ಟದ ಮನೋರಂಜನೆಯೂ ಕೂಡ ಅಲ್ಲಿ ನಡೆಯುತ್ತಿದ್ದವು. ವೈಷ್ಣವ ಧರ್ಮದ ತಿರುಳಾದ 'ಭಗವದ್ಭಕ್ತಿ' ಆ ಪಂಡಿತರ ಬಾಳಲ್ಲಿ ಅದೃಶ್ಯವಾಗಿತ್ತು. ಭಕ್ತಿಯ ಈ ಬಗೆಯ ಅವನತಿ ಮತ್ತು ಭೌತಿಕವಾದದ ಅಭ್ಯುತ್ಥಾನವನ್ನು ಕಂಡು ಅದ್ವೈತ ಆಚಾರ್ಯರೆಂಬ ವಿದ್ವಾಂಸರೂ ವೈಷ್ಣವ ಭಕ್ತರೂ ಆದ ಮಹಾತ್ಮರ ಹೃದಯ ಮಮ್ಮಲ ಮರುಗಿತು. ಅವರು ಶ್ರೀಕೃಷ್ಣನಲ್ಲಿ ಕಂಬನಿದುಂಬಿ ಬೇಡಿಕೊಂಡರು: "ಹೇ ಭಗವಂತ! ನೀನೀಗ ಅವತಾರವೆತ್ತದಿದ್ದರೆ ಈ ಜೀವಿಗಳು ಅನುಗ್ರಹದ ಮಾರ್ಗವನ್ನು ಹೇಗೆ ತಾನೇ ಕಂಡುಕೊಂಡಾರು?" ಆ ಪರಮಭಕ್ತನ ಈ ಬಗೆಯ ಪ್ರಾರ್ಥನೆಯ ಫಲವಾಗಿಯೇ, ಶ್ರೀಚೈತನ್ಯದೇವರು ಈ ಭೂಮಿಯಲ್ಲಿ ಅವತಾರ ತಾಳಿದರು.

ಜಗನ್ನಾಥ ಮಿಶ್ರ ಮತ್ತು ಶಚೀದೇವಿಯವರಿಗೆ ಹತ್ತನೆಯ ಸಂತಾನವಾಗಿ ಶ್ರೀಚೈತನ್ಯರು ಹುಟ್ಟಿದರು. ಎಂಟು ಜನ ಹೆಣ್ಣುಮಕ್ಕಳು ಮತ್ತು ಒಬ್ಬ ಬಾಲಕ ಇವರಿಗಿಂತ ಮುಂಚೆಯೇ ಜನ್ಮತಾಳಿದ್ದರೂ ಹೆಣ್ಣುಮಕ್ಕಳೆಲ್ಲರೂ ಶೈಶವದಲ್ಲಿಯೇ ಅಸುನೀಗಿದ್ದರು. 'ವಿಶ್ವೇಶ್ವರ' ಎಂಬ ಹೆಸರಿನ ಬಾಲಕ, ತನ್ನ ಹದಿನಾರನೆಯ ವಯಸ್ಸಿನಲ್ಲಿಯೇ ಮನೆ-ಮಠಗಳನ್ನು ತೊರೆದು, ಪರಿವ್ರಾಜಕ ಸಂನ್ಯಾಸಿಯಾಗಿ ಸಂಚರಿಸುತ್ತಿದ್ದನು. ಹತ್ತನೆಯ ಕೂಸಾದ ಈ ನವಜಾತ ಶಿಶುವಿಗೆ ಅವನ ತಂದೆ ಜಾತಕದ ಪ್ರಕಾರ 'ವಿಶ್ವಂಭರ' ಎಂದು ಹೆಸರಿಟ್ಟರು. ಅವನ ತಾಯಿ 'ನಿಮಾಯ್' ಎಂದು ಕರೆದಳು. ನಿಮಾಯ್ ಅಂದರೆ 'ಅಲ್ಪಾಯುಷ' ಎಂದರ್ಥ. ಅದಲ್ಲದೆ ಈ ಹೆಸರು ಬೇವಿನ ಮರದ ಎಲೆ ಮತ್ತು ಕಾಯಿಗಳಲ್ಲಿರುವ ಕಹಿಯಾದ ರುಚಿಯನ್ನು ನೆನಪಿಸುತ್ತದೆ. ಬೇಡವಾದ ವಸ್ತುಗಳನ್ನು ಸೂಚಿಸುವ ಈ ಹೆಸರಿಟ್ಟು, ಕೆಡಕುಗಳಿಂದ ಮಗುವನ್ನು ರಕ್ಷಿಸುವುದೇ ತಾಯಿಯ ಇಂಗಿತವಾಗಿತ್ತೆಂದು ತೋರುತ್ತದೆ. ಆಕೆಯ ಹಿಂದಿನ ಎಲ್ಲ ಮಕ್ಕಳೂ ಮೃತರಾದದ್ದು ದುಃಖ ತಂದ ಈ ಬಗೆಯ ಕೆಡಕುಗಳಿಂದಲೇ. ಇದು ಆಗ ಪ್ರಚಲಿತವಾಗಿದ್ದ ಒಂದು ನಂಬಿಕೆ. ಕೆಲವರ ಅಭಿಪ್ರಾಯದಂತೆ, ಶಿಶುವು ಬೇವಿನ ಮರದ ಕೆಳಗೆ ಹುಟ್ಟಿದ್ದರಿಂದ ಆ ಹೆಸರು ಬಂದಿದೆ. ಕಾಲಾಂತರದಲ್ಲಿ, ಆತನ ಅನುಪಮ ಸೌಂದರ್ಯದ ಕುರುಹಾಗಿ, ಹೆಸರೂ ಕೂಡಾ 'ಗೌರಾಂಗ' ಎಂದು ಮಾರ್ಪಟ್ಟಿತು. 'ಗೌರಾಂಗ' ಎಂದರೆ ಚಿನ್ನದಂತಹ ಮೈಕಾಂತಿಯುಳ್ಳವನು ಎಂದರ್ಥ. ಆ ಹೆಸರು ಬಂದಿದ್ದು ಅವನ ಉಪನಯನದ ಸಂದರ್ಭದಲ್ಲಿ. ಶ್ರೀಕೃಷ್ಣ ಚೈತನ್ಯ ಎಂಬ ನಾಮಧೇಯ ಪ್ರಾಪ್ತವಾಗಿದ್ದು ಆತನ ಆಧ್ಯಾತ್ಮಿಕ ಗುರು ಸಂನ್ಯಾಸ ದೀಕ್ಷೆಯನ್ನು ಕೊಡುವ ಸಮಯದಲ್ಲಿ. ಅದರ ಅರ್ಥ 'ಜನಗಳ ಹೃದಯದಲ್ಲಿ ಭಗವಂತನ ಭಾವವನ್ನು ಉದ್ದೀಪನಗೊಳಿಸುವವನು' ಎಂದು.

ನಿಮಾಯಿಯ ಶೈಶವದ ಮತ್ತು ಬಾಲ್ಯದ ಜೀವನ ಭಗವಾನ್ ಶ್ರೀಕೃಷ್ಣನ ಬಾಲ್ಯ ಜೀವನವನ್ನು ಸ್ಮರಣೆಗೆ ತರುವಂತಹುದಾಗಿತ್ತು. ಶಿಶುವಿನ ಕಂಗೊಳಿಸುವ ಸೌಂದರ್ಯ ಹೆಂಗೆಳೆಯರನ್ನು ಎಷ್ಟರಮಟ್ಟಿಗೆ ಆಕರ್ಷಿಸಿತ್ತೆಂದರೆ, ಅವನನ್ನು ನೋಡಬಂದವರೆಲ್ಲಾ ಮುದ್ದಿಸುತ್ತಾ ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ಮಗುವನ್ನು ಬದಲಾಯಿಸಿಕೊಳ್ಳುತ್ತಲೇ ಇದ್ದರು. ಅದರಿಂದ, ಮಗುವಿಗೆ ಆರೈಕೆ ಮಾಡಲು ಅವನ ತಾಯಿಗೆ ಅವಕಾಶವೇ ಸಿಕ್ಕುತ್ತಿರಲಿಲ್ಲ. ಮಗು ಅಳುತ್ತಿರುವ ಸಮಯದಲ್ಲಿ ಹರಿಯ ಪಾವನ ನಾಮದ ಉಚ್ಚಾರವನ್ನು ಕೇಳಿದೊಡನೆಯೇ ಶಾಂತವಾಗುತ್ತಿತ್ತಂತೆ. ಮಗುವು ತೆವಳಲು ಆರಂಭಿಸಿದ್ದೇ ಸಾಕಾಯಿತು, ರಸ್ತೆಗಳ ಕಡೆ ಓಡಿಬಿಡುತ್ತಿತ್ತು. ಅದು ಎಷ್ಟಾಯಿತೆಂದರೆ, ಅವನನ್ನು ಸದಾ ಕಾವಲಿನಲ್ಲಿ ಇಡಬೇಕಾಗಿತ್ತು. ನಿಮಾಯಿ ನಡೆಯಲಾರಂಭಿಸಿದಾಗ ಈ ಓಡಾಟ ಇನ್ನೂ ಹೆಚ್ಚಾಯಿತು. ಒಂದು ದಿನ ವಿಷಸರ್ಪವನ್ನೇ

ಕೈಯಲ್ಲಿ ಅವನು ಓಡಿದನಂತೆ! ಮತ್ತೊಂದು ದಿನ ಆಭರಣಗಳಿಂದ ಅಲಂಕೃತನಾಗಿ ದಾರಿಯಲ್ಲಿ ನಡೆದು ಹೋಗುತ್ತಿರುವಾಗ ಕಳ್ಳನೊಬ್ಬನ ಕೈಗೆ ಸಿಕ್ಕಿಬಿದ್ದನು. ಕಳ್ಳನು ತನ್ನ ರಹಸ್ಯಸ್ಥಾನಕ್ಕೆ ಮಗುವನ್ನು ಕರೆದೊಯ್ಯಲು ಯತ್ನಿಸಿದನು. ಆದರೆ, ಆಶ್ಚರ್ಯ! ಕಳ್ಳನಿಗೆ ದಾರಿ ತಪ್ಪಿಬಿಟ್ಟಿತು! ನೇರವಾಗಿ ಅವನು ನಿಮಾಯಿಯ ಮನೆಗೇ ಬಂದು ತಲುಪಿದನು. ಈ ಅನುಭವ ಆ ಕಳ್ಳನ ಜೀವನದಲ್ಲಿ ಪವಾಡವನ್ನೇ ಉಂಟುಮಾಡಿತು. ಅಂದಿನಿಂದ ಅವನು ಪವಿತ್ರ ಜೀವನವನ್ನು ನಡೆಸಿದನು, ತಪಸ್ವಿಯಾಗಿ ಮಾರ್ಪಟ್ಟನು. ಶ್ರೀಚೈತನ್ಯದೇವನ ಬಾಳಿನಲ್ಲಿ ಮುಂದೆ ನಾವು ಕಾಣುವ ಅನೇಕ ಆಶ್ಚರ್ಯಕರ ಪರಿವರ್ತನೆಗಳಿಗೆ ಇದೊಂದು ಶುಭಾರಂಭವೇ ಸರಿ.

ನಿಮಾಯಿಯ ಅಂಗಸೌಂದರ್ಯ ಮನೋಹರವಾದದ್ದು. ಅವನ ಮೈಬಣ್ಣ ಕರಗಿದ ಚಿನ್ನದಂತೆ ಹೊಳೆಯುತ್ತಿತ್ತು; ಹಸ್ತಗಳು ಮತ್ತು ಅಂಗಾಲು, ಕುಂಕುಮವನ್ನು ಲೇಪಿಸಿದಂತೆ ಕೆಂಬಣ್ಣ ಹಿಂದಿದ್ದವು. ತುಟಿಗಳು ತೊಂಡೆಹಣ್ಣಿನಂತೆ ಗುಲಾಬಿಯ ಬಣ್ಣ ತಳೆದಿದ್ದವು. ಸೊಗಸಾದ ಕಣ್ಣುಗಳು ಕಮಲಪತ್ರದಂತೆ ನೀಳವಾಗಿದ್ದು, ಪದ್ಮಮಧುವನ್ನು ತುಂಬಿಕೊಂಡಂತೆ ತೇವವಾಗಿದ್ದುವು.

ಬಾಲಕನ ಶರೀರದಲ್ಲಿ ಅನೇಕ ಅತೀಂದ್ರಿಯ ಚಿಹ್ನೆಗಳು ಉದ್ಭವಿಸುತ್ತಿರುವುದನ್ನು ಕಾಣಬಹುದಿತ್ತು. ನಿದ್ರಿಸುತ್ತಿರುವಾಗ ಒಮ್ಮೊಮ್ಮೆ ಚಂದ್ರಮಂಡಲದಂತಿರುವ ಆವರಣ ಅವನ ಮೇಲೆ ತೇಲಿಕೊಂಡು ಹೋಗುತ್ತಿತ್ತು. ಅವನ ತಾಯಿಯ ಎದುರಿಗೇ ಅವನ ಶಯ್ಯಾಗೃಹದಲ್ಲಿ ಹಲವಾರು ತೇಜೋಮೂರ್ತಿಗಳು ಕಾಣಿಸಿಕೊಂಡವು. ಒಮ್ಮೆ ನಿಮಾಯಿಯನ್ನು ಅವನ ತಾಯಿ, ಅವನ ತಂದೆ ಕುಳಿತಿದ್ದ ಪಕ್ಕದ ಕೊಠಡಿಗೆ ಹೋಗುವಂತೆ ಹೇಳಿದಳು. ನಿಮಾಯಿಯು ನಡೆಯುತ್ತಿದ್ದಂತೆ ತಂದೆ–ತಾಯಿಯರಿಬ್ಬರೂ, ಮಕ್ಕಳು ಧರಿಸುವ ಪುಟ್ಟ ಕಾಲ್ಗೆಜ್ಜೆಗಳ ಸುನಿನಾದವನ್ನು ಆಲಿಸಿದರು. ನಿಮಾಯಿಯ ಒಳಗೆ ಗೋಪಾಲನೇ ಇದ್ದಾನೆ ಎನ್ನುವುದಕ್ಕೆ ಇದು ನಿದರ್ಶನ ಎಂದು ಅವರಿಬ್ಬರೂ ನಿರ್ಧರಿಸಿದರು. ಆದರೆ ತಾಯಿ ಶಚೀದೇವಿಯ ಮನಸ್ಸಿನಲ್ಲಿ ಇವೆಲ್ಲಾ ಆತಂಕವನ್ನು ಉಂಟುಮಾಡಿದವು. ತನ್ನ ಮುದ್ದಿನ ಕಂದ ನಿಮಾಯಿಗೆ ಕೇಡುಕನ್ನು ತರಬಹುದಾದ ಅಪಶಕುನಗಳು ಇವು ಎಂದು ಆಕೆ ಭಾವಿಸಿದಳು.

ನಿಮಾಯಿ ಬೆಳೆದಂತೆಲ್ಲಾ ಶ್ರೀಕೃಷ್ಣನಂತೆಯೇ ಬಾಲ ಚೇಷ್ಟೆಗಳಲ್ಲಿ ತೊಡಗಿದನು; ಸುತ್ತಲ ಜನರ ಹೃದಯಗಳಲ್ಲಿ ಆನಂದದ ಅಲೆಯನ್ನೇ ಹರಿಸಿದನು. ಆಹಾರವನ್ನೂ ಮರೆತು ಮೈದಾನದಲ್ಲಿ ಆಟದಲ್ಲಿಯೇ ಮಗ್ನನಾಗುವ ಅವನನ್ನು ತಾಯಿಯ ಕಣ್ಣೀರು ಮಾತ್ರ ಹಿಂತಿರುಗಿ ಬರುವಂತೆ ಮಾಡುತ್ತಿತ್ತು. ಚಂಚಲ ಸ್ವಭಾವದ ಬಾಲಕ ನಿಮಾಯಿ, ತನ್ನ ಮನೆಯಿಂದ ಓಡಿಹೋಗಿ, ಪರರ ಮನೆಗಳನ್ನು ನುಗ್ಗಿ, ಪುರಿಯೋ, ಬಾಳೆಯಹಣ್ಣೋ, ಸಿಹಿತಿಂಡಿಗಳೋ – ಏನಿರುವುದೋ ಅದನ್ನು, ಕಂಡದ್ದನ್ನೆಲ್ಲ ಕೇಳುವನು; ಪ್ರತಿಯೊಬ್ಬರೂ ಅವನು ಕೇಳಿದ್ದನ್ನೆಲ್ಲಾ ಸಂತಸದಿಂದ ಕೊಡುವರು. ಒಮ್ಮೊಮ್ಮೆ ಅವನಿಗೆ ಹಾಗೆ ಕೇಳುವುದೂ ಅನಾವಶ್ಯಕವೆನಿಸುವುದು. ಕಳ್ಳತನದಿಂದ ಹಾಲನ್ನು ಕುಡಿದು ಬಿಡುವನು. ಮನೆಯಲ್ಲಿದ್ದ ಅನ್ನವನ್ನೇ ತಿನ್ನುವನು; ಉಳಿದ ಉಣಿಸುಗಳನ್ನೇ ನುಂಗುವನು. ತಿನ್ನಲು ಏನೂ ಸಿಗದಿದ್ದರೆ, ಆ ಮನೆಯ ಪಾತ್ರೆಗಳನ್ನು ಒಡೆದುಹಾಕುವನು. ತನ್ನ ಈ ಚೇಷ್ಟೆಯಲ್ಲಿ ಸಿಕ್ಕಿಬಿದ್ದರೆ ಮನವೊಲಿಸುವ ರೀತಿಯಲ್ಲಿ ಹೀಗೆ ಅಂಗಲಾಚುವನು 'ಈ ಸಲ ಬಿಟ್ಟುಬಿಡಿ, ಇನ್ನೆಂದೂ ಕದಿಯಲು ಇಲ್ಲಿಗೆ ಬರಲಾರೆ'. ಯಾರೂ ಅವನೊಡನೆ ಕೋಪಗೊಳ್ಳುತ್ತಿರಲಿಲ್ಲ. ಅವರೆಲ್ಲ ಅವನ ಜಾಣ್ಮೆಗೆ ಬೆರಗಾಗುತ್ತಿದ್ದರಲ್ಲದೆ ಅವನ ಆಕರ್ಷಕ ನಿಲುವಿಗೆ ಮಾರುಹೋಗುತ್ತಿದ್ದರು.

ನಿಮಾಯಿ ನೃತ್ಯದಲ್ಲಿ ಚತುರನಾಗಿದ್ದನು. ತನ್ನ ಗೆಳೆಯರನ್ನು ಕೂಡಿಕೊಂಡು ನೃತ್ಯಮಾಡುತ್ತಿದ್ದನು. ಆ ಸಮಯದಲ್ಲಿ ಎರಡೂ ಕೈಗಳನ್ನು ಎತ್ತಿ ಹಿಡಿದು ಹರಿಯ ನಾಮವನ್ನು ಭಜಿಸುತ್ತಿದ್ದನು. ಒಮ್ಮೆ ಅವನ ಈ ಸಹಜ ನೃತ್ಯವು ಎಷ್ಟು ಭಾವೋದ್ರೇಕ ಮತ್ತು ರೋಮಾಂಚಕರವಾಗಿತ್ತೆಂದರೆ, ಭಕ್ತಿಯ ಆವೇಶದಿಂದ ಕೂಡಿದ್ದ ಆ ವಾತಾವರಣದಿಂದ ಪ್ರಚೋದಿತನಾದ ವೃದ್ಧ ಪಂಡಿತನೊಬ್ಬ, ನಿಮಾಯಿಯನ್ನು ಕೇಂದ್ರದಲ್ಲಿ ನಿಲ್ಲಿಸಿಕೊಂಡು, ನರ್ತಿಸುತ್ತಿದ್ದ ಬಾಲಕರ ಆ ಗುಂಪಿಗೆ ತಾನೂ ಸೇರಿಕೊಂಡ.

ತನ್ನ ತಂದೆತಾಯಿಯರಿಗೆ ದಿಗಿಲಾಗಿಸುವ ಕೆಲವು ಚಿಹ್ನೆಗಳನ್ನು, ಬಾಲಕ ನಿಮಾಯಿ ತನ್ನ ನಡತೆಯಲ್ಲಿ ಪ್ರಕಟಗೊಳಿಸಿದ. ಮನೆಯವರು ಸಂಪ್ರದಾಯಶೀಲರು. ತಾಯಿ ಶಚೀದೇವಿ ಜಾತಿಪದ್ಧತಿಗಳನ್ನು ಚಾಚೂತಪ್ಪದೆ ಪಾಲಿಸುತ್ತಿದ್ದಳು. ನಿಮಾಯಿ ಅವುಗಳನ್ನು ಉಲ್ಲಂಘಿಸಿ ಅವಳನ್ನು ಅಪಹಾಸ್ಯ ಮಾಡುತ್ತಿದ್ದ. ತಾಯಿ ಅದನ್ನು ಖಂಡಿಸಿದರೆ ಬಾಹ್ಯ ಶೌಚದ ಈ ಭಾವನೆ ಒಂದು ಭ್ರಮೆ ಎಂದು ಉತ್ತರ ಕೊಡುತ್ತಿದ್ದ. ಮೊಂಡುತನದಿಂದ ಜಾತಿಯ ಕಟ್ಟುಪಾಡುಗಳನ್ನು ಇವನು ಮೀರುವುದನ್ನು ಕಂಡು ತಾಯಿ ಕೈಯಲ್ಲೊಂದು ಕೋಲು ಹಿಡಿದು ದಂಡಿಸಲು ಹೊರಟರೆ, ಅಶೌಚ ಸ್ಥಳಗಳಿಗೆ ಓಡಿ ಹೋಗಿಬಿಡುತ್ತಿದ್ದ. ಅಂತಹ ಜಾಗಗಳಿಗೆ ಹೋಗಲು ತಾಯಿಗೆ ಹೇಗೆ ತಾನೇ ಧೈರ್ಯ ಬಂದೀತು? ಅಷ್ಟು ಮಾತ್ರವಲ್ಲ, ಅಸ್ಪೃಶ್ಯನಾದ ಚಮ್ಮಾರನೊಬ್ಬನನ್ನು ಮುಟ್ಟಿದ ನಿಮಾಯಿ, ಆ ಅಶುದ್ಧ ಸ್ಥಿತಿಯಲ್ಲಿಯೇ, ತಾಯಿಯನ್ನು ಮುಟ್ಟಿಬಿಡುತ್ತೇನೆ ಎಂದು ಬೆದರಿಸಿದ! ಪಾಪ, ತಾಯಿ ಏನು ತಾನೇ ಮಾಡುವಳು? ಆ ಸಮಯದಲ್ಲಿ ಮನೆಯೊಳಗೆ ಓಡಿಹೋಗಿ ಬಿಡುತ್ತಿದ್ದಳು.

(ಮುಂದುವರಿಯುವುದು)